**ಅಸಲು ದಾವಾ ಸಂಖ್ಯೆಃ 196 /2021 ಪಿ.ಡಬ್ಲೂ -1**

ದಿನಾಂಕಃ 20.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆಃ ವಾದಿ ಪರ ವಕೀಲರಿಂದಃ-**

1. ದಿಃ 19.01.2021 ರ ಕ್ರಯ ಪತ್ರದ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು,
2. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ಎ ರ ಗಣಕೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು,
3. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಸಿದ 1 ರಸೀದಿ ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು,
4. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಿಃ 01.04.2004 ರಿಂದ 22.03.2024 ರವರೆಗಿನ ಋಣಭಾರ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು,
5. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಿಃ 25.03.2021 ರ ಕ್ರಯ ಪತ್ರದ ಗಣಕೀಕೃತ ಪ್ರತಿಯನ್ನು, ಸದರಿ ದಾಖಲೆ ಪಡೆಯಲು ಸಲ್ಲಿಸಿದ್ದ ರಸೀದಿಯೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು,
6. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ಎ ರ ಗಣಕೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು ನಿಪಿ-9 ಎಂದು,
7. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ತೆರಿಗೆ ಪಾವತಿಸಿದ ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು,
8. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಿಃ 01.04.2004 ರ ಒಂದು ಋಣಭಾರ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು,
9. ದಿಃ 04.05.1988 ರ ಅನ್ಯಕ್ರಾಂತ ಆದೇಶ ಪ್ರತಿಯ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು,
10. ದಿಃ 12.02.2021 ರಂದು ನ್ಯಾಷನಲ್ ಹೈವೇಸ್ ಅಥಾರಿಟಿ ಆಫ್ ಇಂಡಿಯಾ ಇವರು ಮೆ/ಸ್ ಹಿಂದೂಸ್ತಾನ ಪೆಟ್ರೋಲೀಯಂ ಕಾರ್ಪೋರೇಶನ್ ಲಿಮಿಟೆಡ್ ಇವರಿಗೆ ದಾವಾ ಸ್ವತ್ತಿನಲ್ಲಿ ಪೆಟ್ರೋಲ್ ಬಂಕ್ ಸ್ಥಾಪಿಸಲು ನೀಡಿದ್ದ ಅನುಮತಿಯ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು,
11. ನಿಪಿ 13 ಕ್ಕೆ ಸಂಬಂಧಿಸಿದಂತೆ ಡೆಪ್ಯೂಟಿ ಕಮೀಷನರ್ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ ಇವರಿಗೆ ಜಿ ಎಂ ಟೇಕ್ ಆ್ಯಂಡ್ ಪ್ರೋಜೆಕ್ಟ ಡೈರೆಕ್ಟರ್ ನ್ಯಾಷನಲ್ ಹೈವೇಸ್ ಅಥಾರಿಟಿ ಇವರು ಕಳುಹಿಸಿದ್ದ ದಿಃ 17.02.2021 ರ ಪತ್ರದ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-14 ಎಂದು,
12. ದಿಃ 01.03.2021 ರಂದು ಡೆಪ್ಯೂಟಿ ಕಮೀಷನರ್ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ ಇವರು ನೀಡಿದ್ದ ಎನ್ ಒ ಸಿ ಪತ್ರದ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು,
13. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 6 ಫೋಟೋಗಳನ್ನು ಒಂದು ಸಿ ಡಿ ಯೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-16 ರಿಂದ ನಿಪಿ-22 ಎಂದು,

14. ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ನೆಲಮಂಗಲ ಇವರ ಮುಂದೆ ಇತ್ಯರ್ಥಕ್ಕೆ ಬಾಕಿರುವ ಅಸಲು ದಾವೆ ಸಂಖ್ಯೆ 329/2024 ರ ವಾದ ಪತ್ರ, ಪ್ರತಿವಾದ ಪತ್ರಗಳ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-23 ರಿಂದ ನಿಪಿ-26 ಎಂದು,

15. ಅಸಲು ದಾವೆ ಸಂಖ್ಯೆ 329/2024 ರ ಮದ್ಯಂತರ ಅರ್ಜಿ ಸಂಖ್ಯೆ 1 ಧೃಡಿಕೃತ ನಕಲನ್ನು, ನಾನು ಸಲ್ಲಿಸಿದ್ದ ತಕರಾರು ಪತ್ರದ ಧೃಡಿಕೃತ ನಕಲು ಮತ್ತು ದಿ 25.04.2024 ರ ಆದೇಶದ ಧೃಡಿಕೃತ ನಕಲಿನೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-27 ರಿಂದ ನಿಪಿ-29 ಎಂದು,

16. ಅಸಲು ದಾವೆ ಸಂಖ್ಯೆ 329/2024 ರ ಮದ್ಯಂತರ ಅರ್ಜಿ ಸಂಖ್ಯೆ 3 ರ ಧೃಡಿಕೃತ ನಕಲನ್ನು, ನಾನು ಸಲ್ಲಿಸಿದ್ದ ತಕರಾರು ಪತ್ರದ ಧೃಡಿಕೃತ ನಕಲು ಮತ್ತು ದಿ 06.06.2024 ರ ಆದೇಶದ ಧೃಡಿಕೃತ ನಕಲಿನೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-30 ರಿಂದ ನಿಪಿ-32 ಎಂದು,

17. ಅಸಲು ದಾವೆ ಸಂಖ್ಯೆ 329/2024 ರಲ್ಲಿ ಮಾನ್ಯ 2 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ ಸಿ ನೆಲಮಂಗಲ ಇವರು ನೀಡಿದ್ದ ದಿಃ 11.07.2024 ರ ಆದೇಶದ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**